# ಬೇಲೂರು ಮಠದಲ್ಲಿರುವ ಶ್ರೀರಾಮಕೃಷ್ಣ ದೇವಾಲಯ-೨

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಸ್ವಾಮಿ ವಿಮಲಾತ್ಮಾನಂದ

ದೇವಾಲಯದ ನಿರ್ಮಾಣದ ಪ್ರಾಥಮಿಕ ಕಾರ್ಯವನ್ನು ಮಾರ್ಚ್ ೧೦. ೧೯೩೫ರಂದು ಪ್ರಾರಂಭಿಸಲಾಯಿತು. ಅಂದು ಶ್ರೀರಾಮಕೃಷ್ಣರ ಜನ್ಮದಿನ. ಈ ಮುಂಚೆ ಶ್ರೀಮಾತೆ ಶಾರದಾ ದೇವಿಯ ಜನ್ಮದಿನದಂದು ಸಂನ್ಯಾಸಿಗಳು ಮತ್ತು ಬ್ರಹ್ಮಚಾರಿಗಳು ಗುರುತು ಮಾಡಿದ ಜಾಗದಲ್ಲಿ ಭೂಮಿಪೂಜೆ ಮಾಡಿದ್ದರು. ನಿರ್ಮಾಣ ಕೆಲಸದ ಮೇಲ್ವಿಚಾರಣೆಯನ್ನು ಬೇಲೂರು ಮಠದ ಸ್ವಾಮಿ ಪ್ರಬೋಧಾನಂದರಿಗೆ ಹಾಗೂ ಕಂಪನಿಯ ಅಧಿಕಾರಿ ಶ್ರೀ ಗೋಪೇಂದ್ರ ಕೃಷ್ಣ ಸರಕಾರ್‌ರವರಿಗೆ ವಹಿಸಲಾಗಿತ್ತು. ಇಂಜಿನಿಯರ್‌ರ ಆದೇಶದ ಮೇಲೆ ನಿಗದಿತ ಸ್ಥಳದಿಂದ ಸುಮಾರು ನೂರು ಅಡಿಗಳಷ್ಟು ಒಳಕ್ಕೆ ಜಾಗವನ್ನು ಸ್ಥಳಾಂತರಿಸಬೇಕಾಯಿತು. ಇದಕ್ಕಾಗಿ ಗುರುಪೂರ್ಣಿಮೆಯ ಶುಭದಿನದಂದು (ಅಂದರೆ, ಜುಲೈ ೧೬, ೧೯೩೫) ಸ್ವಾಮಿ ವಿಜ್ಞಾನಾನಂದರು ಸಂನ್ಯಾಸಿ, ಬ್ರಹ್ಮಚಾರಿ ಹಾಗೂ ಭಕ್ತರ ಸಮ್ಮುಖದಲ್ಲಿ ಹೊಸ ಅಸ್ತಿಭಾರವನ್ನು ಸ್ಥಳಾಂತರ ಮಾಡಿದರು. ಆ ದಿನ ಶ್ರೀರಾಮಕೃಷ್ಣರಿಗೆ ವಿಶೇಷ ಪೂಜೆ, ಶಾಸ್ತ್ರಗ್ರಂಥಗಳ ಹಾಗೂ ಕಥಾಮೃತದ ವಾಚನ, ರಾಮನಾಮ ಸಂಕೀರ್ತನೆ ಮತ್ತು ಭಜನೆ ನಡೆಯಿತು. ಎಲ್ಲರಿಗೂ ಸಿಹಿ ಹಂಚಲಾಯಿತು. ಹೊಸ ಅಸ್ತಿಭಾರ ಹಾಕುವ ಮುಂಚೆ ಸ್ವಾಮಿ ವಿಜ್ಞಾನಾನಂದರು ಭಗವಾನ್ ಶ್ರೀರಾಮಕೃಷ್ಣರ ಆಶೀರ್ವಾದವನ್ನು ಪಡೆಯಲು ಮಠದ ಹಳೆಯ ದೇವಾಲಯಕ್ಕೆ ಹೋದರು. ಎಂದಿಗಿಂತ ಹೆಚ್ಚು ಸಮಯ ಅಲ್ಲಿ ಇದ್ದರು. "ಯಾಕೆ ತಡವಾಯಿತು?" ಎಂದು ವಿಚಾರಿಸಲು "ನಾನೇನು ಮಾಡಲಿ? ರಾಮಕೃಷ್ಣರು ನನ್ನನ್ನು ಬಿಡಲಿಲ್ಲ" ಎಂದು ಉದ್ಗರಿಸಿದರು.

ನಿರ್ಮಾಣ ಕಾರ್ಯ ಮುಗಿಯಲು ನಾಲ್ಕು ವರ್ಷ ಹಿಡಿಯಿತು. ಒಟ್ಟು ಖರ್ಚು ಎಂಟು ಲಕ್ಷ ರೂಪಾಯಿ ಆಯಿತು. ಮೂಲ ನಕ್ಷೆಯಲ್ಲಿ ಇಲ್ಲದ ಕೆಲವು ಹೆಚ್ಚಿನ ನಿರ್ಮಾಣಗಳ ಕಾರಣದಿಂದ ಅಂದಾಜಿಗಿಂತ ಎರಡು ಲಕ್ಷ ರೂ.ಗಳು ಖರ್ಚಾಯಿತು. ನವೆಂಬರ್ ೧, ೧೯೩೭ ಮತ್ತು ಏಪ್ರಿಲ್ ೩೦, ೧೯೩೮ರಂದು ಮಠದವರು ಎರಡು ಕರಪತ್ರಗಳನ್ನು ಹೊರಡಿಸಿ ಭಕ್ತರು ಹಾಗೂ ಜನಸಾಮಾನ್ಯರು ಹೆಚ್ಚಿನ ಖರ್ಚನ್ನು ಭರಿಸಲು ಮುಂದೆಬರಬೇಕೆಂದು ವಿನಂತಿಸಿದರು. ಇದಕ್ಕೆ ನೀರಸ ಪ್ರತಿಕ್ರಿಯೆ ಬಂತು. ಈ ಖೋತಾ ಭರಿಸಲು ಸುಮಾರು ೨೫ ವರುಷಗಳೇ ಹಿಡಿದವು.

ದೇವಾಲಯದ ಉದ್ದ ೨೩೫ ಅಡಿ, ಅಗಲ ೧೪೦ ಅಡಿ. ಒಟ್ಟು ವಿಸ್ತೀರ್ಣ ೩೨,೯೦೦ ಚದರ ಅಡಿ. ನವರಂಗದ ಉದ್ದ ೧೫೨ ಅಡಿ, ಅಗಲ ೭೨ ಅಡಿ ಹಾಗೂ ಎತ್ತರ ೪೮ ಅಡಿ ಇದೆ. ಗರ್ಭಗುಡಿಯು ೯೦x೯೦x೩.೫ ಅಡಿಗಳ ಕಾಂಕ್ರೀಟಿನ ತಳಹದಿಯನ್ನು ಹೊಂದಿದೆ. ಗರ್ಭಗುಡಿ ಮತ್ತು ನವರಂಗಗಳು ಪ್ರತ್ಯೇಕವಾಗಿದ್ದರೂ ಅವು ಒಳಗಿನಿಂದ ಹೊಂದಿಕೊಂಡಿವೆ; ಇದು ಹೊರಗೆ ಕಾಣುವುದಿಲ್ಲ. ಸೌಂದರ್ಯ ಮತ್ತು ಭವ್ಯತೆಯ ದೃಷ್ಟಿಯಿಂದ ದೇವಾಲಯವು ಪಾಶ್ಚಿಮಾತ್ಯ ಹಾಗೂ ಪೌರಸ್ತ್ಯ ಶೈಲಿಗಳನ್ನು ಒಳಗೊಂಡಿದ್ದು, ಭಾರತೀಯ ದೇವಾಲಯ ವಾಸ್ತುಶಿಲ್ಪಕ್ಕೆ ಒಂದು ಹೊಸ ನಮೂನೆಯನ್ನು ಕೊಟ್ಟಿದೆ.

ಸಿರಾಮಿಕ್ (ಕುಂಭಕಲೆ) ಶೈಲಿಯ ಗುಮ್ಮಟಗಳು ಗರ್ಭಗುಡಿಯ ಮೇಲೆ ಇವೆ. ಪ್ರಾಚೀನ ಒಡಿಸ್ಸಿ ಶೈಲಿಯ ಆಮಲಕಿ (ನೆಲ್ಲಿಕಾಯಿ) ಮತ್ತು ಸ್ವರ್ಣಲೇಪಿತ ಲೋಹದ ಕಲಶವನ್ನು ಮಧ್ಯದಲ್ಲಿರುವ ಗುಮ್ಮಟದ ಮೇಲೆ ಇಡಲಾಗಿದೆ. ಎಂಟು ಸಣ್ಣ ಗುಮ್ಮಟಗಳು ಮತ್ತು ನಾಲ್ಕು ಅಲಂಕಾರ ಮಂಟಪಗಳು ಮಧ್ಯದಲ್ಲಿರುವ ಗುಮ್ಮಟದ ಸುತ್ತಲೂ ಇದ್ದು, ಇಡೀ ಗರ್ಭಗುಡಿಯು ಶೋಭಾಯಮಾನವಾಗಿದೆ. ಸುವರ್ಣಲೇಪಿತ ಕಲಶಗಳ ಮೇಲೆ ಮೊನಚಾದ ಆಕೃತಿಗಳಿವೆ. ಈ ಅಲಂಕಾರ ಮಂಟಪಗಳು ಬಂಗಾಳದ ಸಾಂಪ್ರದಾಯಿಕ ಹಿಂದೂ ದೇವಾಲಯಗಳ ನೆನಪು ಮಾಡಿಕೊಡುತ್ತವೆ. ಮೇಲ್ಛಾವಣಿಯ ಆಕಾರ ಬಂಗಾಳದ ಗ್ರಾಮೀಣ ಹುಲ್ಲಿನ ಗುಡಿಸಲಿನಂತಿದ್ದು, ಕಾಮಾರಪುಕುರದಲ್ಲಿರುವ ಶ್ರೀರಾಮಕೃಷ್ಣರ ಕುಟೀರದ ನೆನಪಾಗುತ್ತದೆ.

ಗರ್ಭಗುಡಿಯ ಸುತ್ತ ಪ್ರದಕ್ಷಿಣೆ ಮಾಡಲು ೧೦ ಅಡಿ ಅಗಲದ ಮಾರ್ಗವಿದೆ. ಈ ಮಾರ್ಗದ ಕಮಾನಿನ ಮೇಲೆ ಕಲ್ಲಿನಿಂದ ನಿರ್ಮಾಣ ಮಾಡಿದ ನವಗ್ರಹ ದೇವತೆಗಳಿವೆ. ಸೂರ್ಯ, ಗುರು, ಮಂಗಳ ಉತ್ತರ ದಿಕ್ಕಿನಲ್ಲಿ; ಚಂದ್ರ, ಶುಕ್ರ, ಬುಧರು ಪೂರ್ವ ದಿಕ್ಕಿನಲ್ಲಿ; ಶನಿ, ಕೇತು, ರಾಹು ಪಶ್ಚಿಮ ದಿಕ್ಕಿನಲ್ಲಿದ್ದು ಒರಿಸ್ಸಾ ದೇವಾಲಯಗಳ ನೆನಪು ತರುತ್ತವೆ. ಈ ನವಗ್ರಹ ದೇವತೆಗಳು ದೇವಾಲಯದ ರಕ್ಷಕ ದೇವತೆಗಳು. ಸಮಕೋನದಲ್ಲಿರುವ ಬಿಳಿಯ (ಅಮೃತಶಿಲೆ) ಪವಿತ್ರಪೀಠವು ಶಿವನ ಡಮರು ಆಕಾರದಲ್ಲಿದ್ದು ಮಧ್ಯದಲ್ಲಿ ಒಂದು ದೊಡ್ಡ ಹಾಗೂ ಚೆನ್ನಾಗಿ ಅರಳಿದ ಕಮಲವಿದೆ. ಖ್ಯಾತ ಚಿತ್ರಗಾರ ನಂದಲಾಲ್ ಬಸು ಈ ವಿನ್ಯಾಸವನ್ನು ರೂಪಿಸಿದರು. ಹಾಗೆಯೇ ಅವರ ಮಾರ್ಗದರ್ಶನದಲ್ಲಿ ಪೀಠದ ಮೂರು ಭಾಗಗಳಲ್ಲಿ ಮೂರು ಬ್ರಾಹ್ಮೀ ಹಂಸಗಳನ್ನು ಕೆತ್ತಲಾಗಿದೆ.



ಬೇಲೂರು ಮಠದ ಶ್ರೀರಾಮಕೃಷ್ಣ ಮಂದಿರದ ಗರ್ಭಗುಡಿಯಲ್ಲಿರುವ ಶ್ರೀರಾಮಕೃಷ್ಣರ ಪೂರ್ಣಮೂರ್ತಿ


ಪೀಠವು ಆರು ಅಡಿ ಎತ್ತರವಿದ್ದು, ಬಹಳ ದೂರದಿಂದ, ಅಂದರೆ ಮುಖ್ಯದ್ವಾರದ ಹೊರಗಿನಿಂದಲೂ ಅದನ್ನು ನೋಡಬಹುದು. ಅರಳಿದ ಕಮಲದ ಮೇಲೆ ಸಮಾಧಿಮಗ್ನರಾಗಿ ಕುಳಿತಿರುವ ಶ್ರೀರಾಮಕೃಷ್ಣರ ವಿಗ್ರಹವಿದೆ. ಇದನ್ನು ಬಾಗ್‌ಬಜಾರಿನ ಖ್ಯಾತ ಶಿಲ್ಪಿ ಶ್ರೀ ಗೋಪೇಶ್ವರ ಪಾಲ್‌ರವರು ಇಟಲಿಯ ಅಮೃತಶಿಲೆಯಿಂದ ನಿರ್ಮಿಸಿದರು.

ಸಾಲ್ಕಿಯಾದ (ಹೌರಾ ಸಮೀಪ) ಒಬ್ಬ ನುರಿತ ಬಡಗಿಯು ಪೀಠಕ್ಕೆ ಒಂದು ಸುಂದರವಾದ ತೇಗದ ಆವರಣ ತಯಾರಿಸಿದನು. ಹೊಳೆಯುವ ಮತ್ತು ಬಾಗಿರುವ ಕೈಗಳನ್ನು ಇದಕ್ಕೆ ಆಧಾರವಾಗಿ ಕೊಡಲಾಯಿತು. ಆವರಣದ ಮುಂಭಾಗ ಓಂಕಾರದಿಂದ ಅಲಂಕೃತವಾಗಿದೆ. ಗರ್ಭಗುಡಿಗೆ ತೇಗದ ಮರದಿಂದ ಹನ್ನೊಂದು ಬಾಗಿಲುಗಳನ್ನು ಒಬ್ಬ ಚೀನಿ ಬಡಗಿ ತಯಾರಿಸಿದನು. ಪೂಜಾ ಸಾಮಗ್ರಿಗಳನ್ನು ಇಡಲು ಕೆಲವು ಗೂಡುಗಳಿವೆ. ಜಾಲಂಧರದ ಮೇಲ್ಭಾಗವು ನಾಲ್ಕು ನವಿಲಿನ ವಿಗ್ರಹಗಳಿಂದ ಅಲಂಕೃತವಾಗಿದೆ. ಗರ್ಭಗುಡಿಯಲ್ಲಿ ಯಾವುದೇ ಅಲಂಕಾರಗಳಿಲ್ಲದೆ ಶಾಂತ ಮತ್ತು ಶುಭ್ರ ವಾತಾವರಣವಿದೆ. ಇದು ಶ್ರೀರಾಮಕೃಷ್ಣರ ತ್ಯಾಗಕ್ಕೆ ಅನುಗುಣವಾಗಿದೆ. ಗರ್ಭಗುಡಿಯ ಹಿಂಭಾಗದಲ್ಲಿ ಉಗ್ರಾಣ ಹಾಗೂ ಮಹಡಿಯಲ್ಲಿ ಶ್ರೀರಾಮಕೃಷ್ಣರ ಮಲಗುವ ಕೊಠಡಿ ಇವೆ.

ಸ್ವಾಮಿಜಿಯು ರೂಪಿಸಿಕೊಂಡ ಹಾಗೆ ಗರ್ಭಗುಡಿ ಹಾಗೂ ನವರಂಗ ಒಂದಾಗಿವೆ. ಪೀಠ, ಪೂಜಾಸ್ಥಾನ, ಮಧ್ಯಾಂಗಣದ ಇಕ್ಕೆಲದ ಹಜಾರಗಳು ಚರ್ಚಿನ ಮಾದರಿಯಲ್ಲಿ ಇವೆ. ಮುಖ್ಯದ್ವಾರದಲ್ಲಿ ಜಂಟಿಕಂಬಗಳ ಮೇಲೆ ಕೂಡಿಸಿದ ಒಂದು ದೊಡ್ಡ ಕಮಾನಿದೆ. ಇದರ ಮೇಲೆ ಇನ್ನೊಂದು ಏಣಿಯಾಕಾರದ ಸಣ್ಣ ಕಮಾನಿನಲ್ಲಿ ಒಂದು ಶಿವಲಿಂಗವಿದೆ.

ನವರಂಗದಲ್ಲಿ ಶ್ರೀರಾಮಕೃಷ್ಣರ ನೇರಶಿಷ್ಯರ ಭಾವಚಿತ್ರಗಳನ್ನು ಇಡಲು ಗೂಡುಗಳಿವೆ. ಶ್ರೀರಾಮಕೃಷ್ಣರ ಜೀವನದ ಕೆಲವು ಘಟನೆಗಳ ಚಿತ್ರಗಳನ್ನು ಗೋಡೆಗಳಲ್ಲಿ ಹಾಕುವ ವಿಚಾರವಿತ್ತು. ಆದರೆ ಅದು ಕಾರ್ಯಗತವಾಗಲಿಲ್ಲ. "ಈಗಲೂ ಹಲವಾರು ಭಕ್ತರ ಮನಸ್ಸಿನಲ್ಲಿ ದಿವ್ಯತ್ರಯರ ಭೇಟಿಯ ಅಥವಾ ಅವರ ಭಾವಚಿತ್ರಗಳ ನೆನಪು ಹಸಿರಾಗಿದೆ. ಆದ್ದರಿಂದ ನಾನು ಬರೆಯುವ ಚಿತ್ರಗಳಿಗೆ ಹಾಗೂ ಭಾವಚಿತ್ರಗಳಿಗೆ ಹೆಚ್ಚು ವ್ಯತ್ಯಾಸವಿರುವುದಿಲ್ಲ. ಇದರಿಂದ ಸಾಮಾನ್ಯ ಜನರಿಗೆ ಅಸಮಾಧಾನವಾಗಬಹುದು" ಎಂಬುದು ನಂದಲಾಲ ಬಸುರವರ ಅಭಿಪ್ರಾಯವಾಗಿತ್ತು. ಈ ವಿಚಾರವನ್ನು ಸಂಘದ ಹತ್ತನೆಯ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ವೀರೇಶ್ವರಾನಂದಜಿಯವರು ತಿಳಿಸಿದರು.

ಸ್ವಾಮಿಜಿಯವರು ದೇವಾಲಯದ ನಿರ್ಮಾಣದ ಬಗ್ಗೆ



ಬೇಲೂರು ಮಠದಲ್ಲಿರುವ ದೇವಾಲಯಗಳ ಒಂದು ವಿಹಂಗಮ ನೋಟ –
ಎಡದಿಂದ, ಸ್ವಾಮಿ ವಿವೇಕಾನಂದರ, ಶ್ರೀಶಾರದಾದೇವಿಯವರ, ಸ್ವಾಮಿ ಬ್ರಹ್ಮಾನಂದರ ಮಂದಿರಗಳು

ಸಂಪೂರ್ಣ ಜವಾಬ್ದಾರಿಯನ್ನು ಸ್ವಾಮಿ ವಿಜ್ಞಾನಾನಂದರಿಗೆ ವಹಿಸಿದ್ದರು. ಹಾಗಾಗಿ ಅವರ ಬಗ್ಗೆ ಪ್ರಸ್ತಾಪ ಮಾಡದಿದ್ದರೆ ಈ ಲೇಖನ ಅಪೂರ್ಣವಾದೀತು. ೧೯೩೭ರಲ್ಲಿ ವಿಜ್ಞಾನಾನಂದರು ಸಂಘದ ನಾಲ್ಕನೆಯ ಅಧ್ಯಕ್ಷರಾದರು. ಆಗ ಅವರು ಅಲಹಾಬಾದಿನಲ್ಲಿ ಇರುತ್ತಿದ್ದರು. ಅಲ್ಲಿಂದ ಆಗಾಗ ಬೇಲೂರಿಗೆ ಬಂದು ಕೆಲಸದ ಪ್ರಗತಿಯ ಉಸ್ತುವಾರಿ ಮಾಡುತ್ತಿದ್ದರು. ಶಿಲ್ಪಿ ಗೋಪೇಶ್ವರ ಪಾಲ್‌ರ ಸ್ಟುಡಿಯೋಗೆ ಆಗಾಗ ಭೇಟಿ ನೀಡಿ ಗುರುಮಹಾರಾಜರ ಅಮೃತಶಿಲೆಯ ಪ್ರತಿಮೆ ತಯಾರಿಯ ಬಗ್ಗೆ ಸೂಕ್ತ ಸಲಹೆಗಳನ್ನು ಕೊಡು ತ್ತಿದ್ದರು. ತೀವ್ರ ಗತಿಯಲ್ಲಿ ಕೆಲಸಗಳನ್ನು ಮುಗಿಸಲು ಅವರು ಒತ್ತಾಯ ಮಾಡುತ್ತಿದ್ದರು. ನವರಂಗದ ಕಾರ್ಯ ಪೂರ್ತಿ ಆಗ ದಿದ್ದರೂ ಅವರೇ ಪಂಚಾಂಗವನ್ನು ನೋಡಿ ಸಮರ್ಪಣಾ ದಿನವನ್ನು ಅಂದರೆ ಉದ್ಘಾಟನಾ ದಿನವನ್ನು ನಿಶ್ಚಯಿಸಿದರು.

ಶುಕ್ರವಾರ ಜನವರಿ ೧೪, ೧೯೩೮, ಮಕರ ಸಂಕ್ರಾಂತಿಯ ಪುಣ್ಯದಿನದಂದು ದೇವಾಲಯ ಸಾರ್ವಜನಿಕರಿಗೆ ಸಮರ್ಪಣೆ ಯಾಯಿತು. ಸಂಘದ ವಿವಿಧ ಶಾಖೆಗಳಿಂದ ೧೫೦ಕ್ಕೂ ಅಧಿಕ ಸಂನ್ಯಾಸಿಗಳು, ಭಾರತದ ಎಲ್ಲಾ ಭಾಗಗಳಿಂದ ಭಕ್ತಾದಿಗಳು ಬಂದಿದ್ದರು. ಸುಮಾರು ಐವತ್ತು ಸಾವಿರ ಜನ ಈ ಶುಭ ಕಾರ್ಯದಲ್ಲಿ ಭಾಗವಹಿಸಿದ್ದರು. ಸುಮಾರು ಹತ್ತು ಸಾವಿರ ಜನ ಪ್ರಸಾದವನ್ನು ಸ್ವೀಕರಿಸಿದರು. ಮುಖ್ಯ ದಾನಿಗಳಾದ ಕು.ಹೆಲನ್ ಹಾಗೂ ಶ್ರೀಮತಿ ಫೊರ್‌ಸ್ಟೆರ್ ಅವರುಗಳು ಸ್ವಾಮಿ ಅಖಿಲಾನಂದರ ಜೊತೆಯಲ್ಲಿ ಅಮೆರಿಕದಿಂದ ಆಗಮಿಸಿ ಈ ಶುಭ ಸಮಾರಂಭದಲ್ಲಿ ಭಾಗವಹಿಸಿ, ಭಕ್ತಾದಿಗಳ ಹೃತ್ಪೂರ್ವಕ ಹಾರೈಕೆಗಳನ್ನು ಸ್ವೀಕರಿಸಿದರು. ಆ ದಿನದ ಕಾರ್ಯಕ್ರಮ ಈ ರೀತಿಯಿತ್ತು: ಕಾಶಿ ಮಠದವರು ಮತ್ತು ಬಂಗಾಳದ ಪಂಡಿತರು ಸೇರಿ ಎರಡು ದಿನ ವೈದಿಕ ಹೋಮಗಳನ್ನು ಹೊಸ ದಾಗಿ ನಿರ್ಮಿಸಿದ್ದ ಯಜ್ಞಮಂಟಪದಲ್ಲಿ ಮಾಡಿದರು. ಪೂರ್ವ ಭಾವಿ ಪೂಜೆ ಮತ್ತು ಇತರ ಕಲಾಪಗಳು ೧೩ರಂದು ಸಂಜೆ ಪ್ರಾರಂಭವಾದವು. ೧೪ರಂದು ಬೆಳಿಗ್ಗೆ ೬.೨೦ಕ್ಕೆ ಆರತಿಯಾದ ನಂತರ ಸಂನ್ಯಾಸಿಗಳು, ಬ್ರಹ್ಮಚಾರಿಗಳು ಹಾಗೂ ಭಕ್ತರು ಸೇರಿದ್ದ ಒಂದು ಶೋಭಾಯಾತ್ರೆಯು ಹಳೆಯ ದೇವಾಲಯದಿಂದ ಪ್ರಾರಂಭವಾಯಿತು. ಸ್ವಾಮಿ ವಿಜ್ಞಾನಾನಂದರು ಗುರುಮಹಾ ರಾಜರ ಅವಶೇಷಗಳನ್ನು ಸ್ವತಃ ಎತ್ತಿಕೊಂಡು ನಡೆದರು. ಶ್ರೀರಾಮಕೃಷ್ಣರ ಭಾವಚಿತ್ರವನ್ನು ಒಂದು ಪಲ್ಲಕ್ಕಿಯಲ್ಲಿ ಸಂನ್ಯಾಸಿಗಳು ಹೊತ್ತರು. ಎರಡು ಬದಿಯಲ್ಲೂ ಕರ್ಪೂರ ಮತ್ತು ಸುಗಂಧಗಳನ್ನು ಉರಿಸಿದರು. ರಸ್ತೆಯ ಮೇಲೆ ಕೆಂಪು ರತ್ನಗಂಬಳಿಯನ್ನು ಹಾಸಿದ್ದರು. ಶಂಖ ಮತ್ತು ಘಂಟೆಗಳ ನಿನಾದದ ಜೊತೆ ಶೋಭಾಯಾತ್ರೆ ಸಾಗಿತು. ನವಯುಗದ ಅವತಾರ (**ಐಶೇಛೆ ನೂತನ್ ಮಾನುಷ್**. . . ) ಎಂಬ ಪ್ರಖ್ಯಾತವಾದ ಗೀತೆಯನ್ನು ಗಾಯಕರ ತಂಡ ಹಾಡುತ್ತಿತ್ತು. ಬೆಳಿಗ್ಗೆ ೬.೩೦ಕ್ಕೆ ಶೋಭಾಯಾತ್ರೆಯು ಹೊಸ ದೇವಾಲಯ ವನ್ನು ತಲುಪಿತು. ಸ್ವಾಮಿ ವಿಜ್ಞಾನಾನಂದರು ಶ್ರೀರಾಮಕೃಷ್ಣರ ಅವಶೇಷಗಳನ್ನು ಪೀಠದಲ್ಲಿ ಸ್ಥಾಪಿಸಿದರು. ದಿನವಿಡೀ ಹೋಮ, ಪೂಜೆ, ಭಜನೆ ಹಾಗೂ ಶಾಸ್ತ್ರಗಳ ಪಠಣದಲ್ಲಿ ಕಳೆಯಿತು. ಸಮರ್ಪಣೆ ಸಮಾರಂಭ ಮುಗಿದ ನಂತರ 'ನಲವತ್ತು ವರುಷಗಳ ನಂತರ ಈ ದಿನ ಸ್ವಾಮಿಜಿಯವರ ಕನಸು ಸಾಕಾರವಾಗಿದೆ. ದೊಡ್ಡವರ ಮಾತು ಸತ್ಯವಾಗುತ್ತದೆ. ಎಲ್ಲರಿಗೂ ಈ ದೇವಾಲಯವನ್ನು ನೋಡಿ ಸಂತೋಷ

ವಾಗಿದೆ. ಬೇಲೂರು ಮಠದ ಆಕರ್ಷಣೆ ಎಂದರೆ ಈ ಬೃಹತ್ತಾದ ದೇವಾಲಯ. ಇವತ್ತಿಗೆ ನನ್ನ ಜವಾಬ್ದಾರಿ ಮುಗಿಯಿತು. ನಾನು ಸ್ವಾಮಿಜಿಯವರಿಗೆ ಕೇಳಿದೆ: “ ‘ನೀವು ಮೇಲಿಂದ ದೇವಾಲಯವನ್ನು ವೀಕ್ಷಣೆ ಮಾಡುವುದಾಗಿ ಹೇಳಿದ್ದಿರಿ. ನೋಡಿ ಇವತ್ತು ಶ್ರೀಠಾಕೂರರನ್ನು ಹೊಸ ದೇವಾಲಯದಲ್ಲಿ ಸ್ಥಾಪಿಸಲಾಗಿದೆ.’ ” ಸ್ವಾಮಿಜಿ, ರಾಖಾಲ್, ಮಹಾಪುರುಷ್, ಶರತ್, ಹರಿ, ಗಂಗಾಧರ ಮಹಾರಾಜ್ ಮತ್ತು ಅನೇಕರು ಇವತ್ತಿನ ಸಮಾರಂಭವನ್ನು ವೀಕ್ಷಿಸುತ್ತಿರುವುದನ್ನು ನಾನು ಸ್ಪಷ್ಟವಾಗಿ ನೋಡುತ್ತಿದ್ದೇನೆ’ ಎಂದು ವಿಜ್ಞಾನಾನಂದರು ನುಡಿದರು.

ಕೊಲ್ಕತಾದ ಪೌರರು ವಿವೇಕಾನಂದ ಸೊಸೈಟಿಯ ಜತೆಗೂಡಿ ಜನವರಿ ೩೧, ೧೯೩೮ರಂದು ಆಲ್ಬರ್ಟ್ ಹಾಲಿನಲ್ಲಿ ವಿದೇಶಿ ದಾನಿಗಳಿಬ್ಬರಿಗೆ ಸನ್ಮಾನ ಮಾಡಿದರು. ಮಹಾಪೌರ ಸನತ್ ರಾಯ್‌ಚೌಧುರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸುಷಾಂಗ್ ಹಾಗೂ ಮೈಮನ್‌ಸಿಂಗ್ ರಾಜ್ಯಗಳ (ಈಗ ಬಾಂಗ್ಲಾದೇಶದ ರಾಜ್ಯಗಳು) ಮಹಾರಾಜರು, ಪ್ರೊ. ಬಿನಯ್ ಕುಮಾರ್ ಸರಕಾರ್, ಡಾ. ಡಿ.ಪಿ. ಘೋಷ್, ಶ್ರೀ ಬಿ.ಸಿ. ಚಟರ್ಜಿ, ಡಾ. ಸಾವಿತ್ರಿ ದೇವಿ ಮುಂತಾದ ಪ್ರತಿಷ್ಠಿತ ವ್ಯಕ್ತಿಗಳು ಹಾಗೂ ಸ್ವಾಮಿ ವಿರಜಾನಂದ, ಸ್ವಾಮಿ ಮಾಧವಾನಂದ ಮುಂತಾದ ಸಂನ್ಯಾಸಿಗಳು ಭಾಗವಹಿಸಿ ಸಮಾರಂಭಕ್ಕೆ ಶೋಭೆ ತಂದರು. ಫೆಬ್ರವರಿ ೪, ೧೯೩೮ರಂದು ಕೊಲ್ಕತಾದ ಗ್ರ್ಯಾಂಡ್ ಹೊಟೆಲ್‌ನಲ್ಲಿ ನದಿಯಾ ಪ್ರದೇಶದ ಮಹಾರಾಣಿಯ ಅಧ್ಯಕ್ಷತೆಯಲ್ಲಿ ದಾನಿಗಳಿಗಾಗಿ ಇನ್ನೊಂದು ಸನ್ಮಾನ ಸಮಾರಂಭ ನಡೆಯಿತು.

ವಿವಿಧ ಶೈಲಿ ವಿನ್ಯಾಸಗಳು ಈ ದೇವಾಲಯದಲ್ಲಿ ಮಿಳಿತವಾಗಿವೆ. ಇದು ಸ್ವಾಮಿಜಿಯವರ ಆಸೆಯೂ ಆಗಿತ್ತು. ವಿವಿಧ ವಿಶ್ವಧರ್ಮಗಳ ಸಮನ್ವಯ ಇಲ್ಲಿ ಇದೆ. ತನ್ನ ನಂಬಿಕೆಗಳಿಗೆ ಗಾಸಿಯಾಗದಂತೆ ಯಾವುದೇ ಪಂಥದ ಭಕ್ತನು ಈ ದೇವಾಲಯಕ್ಕೆ ಬರಲು ಸಾಧ್ಯವಾಗಬೇಕೆಂಬುದು ಸ್ವಾಮಿಜಿಯವರ ಆಶಯವಾಗಿತ್ತು. ಕನಸು ನನಸಾಯಿತು. ಯಾವುದೇ ಪಂಥದವ, ಬಡವ, ಬಲ್ಲಿದ, ನಿರಕ್ಷರಿ, ನಾಸ್ತಿಕ, ಬ್ರಾಹ್ಮಣ, ಶೂದ್ರ, ಸ್ತ್ರೀ, ಪುರುಷ, ಯಾರಿಗೂ ಈ ದೇವಾಲಯದಲ್ಲಿ ಪ್ರವೇಶಕ್ಕೆ ನಿರ್ಬಂಧವಿಲ್ಲ. ಎಲ್ಲರಿಗೂ ಮುಕ್ತ ಪ್ರವೇಶ ಹಾಗೂ ತಮಗೆ ತೋರಿದ ರೀತಿಯಲ್ಲಿ ಅವರು ಶ್ರೀರಾಮಕೃಷ್ಣರಿಗೆ ಗೌರವ ಸಲ್ಲಿಸಬಹುದು. ಎಲ್ಲಾ ಧರ್ಮಗಳಿಗೂ ಈ ದೇವಾಲಯ ಒಂದು ಪ್ರಾರ್ಥನಾ ಕೇಂದ್ರ. “ಎಷ್ಟು ಮತಗಳೋ ಅಷ್ಟು ಪಥಗಳು” ಎಂಬ ಪರಮ ಸತ್ಯದ ಮೂರ್ತರೂಪವೇ ಈ ದೇವಾಲಯ.

## ಮನನ–ಮಾನ್ಯ

ಪ್ರಾರ್ಥನೆಯಿಂದ ಎಂಥ ಪರಿಸ್ಥಿತಿಯಲ್ಲೂ ಕುಗ್ಗದ ಮನ.

ಜೀವನದಲ್ಲಿ ಸಹಜವಾಗಿ ಬರುವ ಕಷ್ಟಸಂಕಟಗಳನ್ನು ಧೈರ್ಯ–ಸ್ಥೈರ್ಯಗಳಿಂದ ಎದುರಿಸುವುದೇ ಧೀರ ಮಾನವನ ಲಕ್ಷಣ. ಅದೇ ಆರೋಗ್ಯಕರವಾದ ಮನೋಧರ್ಮ, ಬೆಳವಣಿಗೆಯ ಲಕ್ಷಣ. ಆದರೆ ಮನುಷ್ಯ ಪ್ರಯತ್ನಕ್ಕೂ ಒಂದು ಮಿತಿಯುಂಟು. ದೇಹಶಕ್ತಿ, ಬುದ್ಧಿಸಾಮರ್ಥ್ಯ, ವಿದ್ಯೆ, ಸಂಪತ್ತು, ಅತ್ಯಾಧುನಿಕ ವಿಜ್ಞಾನ ತಂತ್ರಗಳನ್ನೆಲ್ಲ ವಿಫಲಗೊಳಿಸುವ ಸಂಕಟ ಪರಿಸ್ಥಿತಿಯಲ್ಲಿ ಮನುಷ್ಯನಿಗೆ ತನ್ನ ಅಸಹಾಯಕತೆಯ ಅರಿವಾಗುತ್ತದೆ. ಆದರೂ ನಾವು ಹತಾಶರಾಗಬೇಕಾಗಿಲ್ಲ. ಅಗೋಚರವಾದ ವಿಶ್ವಚೈತನ್ಯಕ್ಕೆ ಶರಣಾಗಿ ಸಲ್ಲಿಸುವ ಪ್ರಾರ್ಥನೆ, ಅತ್ಯಾಶ್ಚರ್ಯಕರವಾಗಿ ನಮ್ಮನ್ನು ಸಂಕಟದಿಂದ ಪಾರುಮಾಡುತ್ತದೆ. ಈ ಜಗತ್ತೆಲ್ಲವನ್ನೂ ಪ್ರೇಮಮಯಿಯೂ, ಪರಮಕರುಣಾಪೂರ್ಣನೂ ಆದ ಭಗವಂತನು ರಕ್ಷಿಸುತ್ತಿರುವುದು ಅನುಭವಕ್ಕೆ ಬರುತ್ತದೆ.

ಶ್ರದ್ಧಾಭಕ್ತಿಗಳಿಂದ ಹೃತ್ಪೂರ್ವಕವಾಗಿ ಮಾಡಿದ ಪ್ರಾರ್ಥನೆಗೆ ಅಸಾಧ್ಯವಾದುದು ಯಾವುದೂ ಇಲ್ಲ. ತನಗಾಗಿ, ತನ್ನ ಬಂಧು ಮಿತ್ರರಿಗಾಗಿ, ದುಃಖಿತರಿಗಾಗಿ, ನೊಂದವರಿಗಾಗಿ ಸ್ವಾರ್ಥರಹಿತವಾಗಿ ಮಾಡುವ ಪರಿಶುದ್ಧ ಹೃದಯದ ಪ್ರಾರ್ಥನೆಯಲ್ಲಿ ಅಸಾಧಾರಣ ಶಕ್ತಿ ಅಡಗಿದೆ. ನಿಜವಾಗಿ ಬೇಕಾದುದು ದೇವರಲ್ಲಿ ದೃಢವಾದ ನಂಬಿಕೆ. ಗಾಢವಾದ, ಅಚಲವಾದ ನಂಬಿಕೆ ದೈವೀಶಕ್ತಿಯನ್ನೇ ಎಳೆದು ತರಬಲ್ಲುದು. ನಾಮಸ್ಮರಣೆ, ಭಕ್ತಿಯುತ ಪ್ರಾರ್ಥನೆ, ಭಜನೆ, ಸತ್ಸಂಗ, ಸದ್ಗ್ರಂಥಗಳ ವಾಚನ ಇವುಗಳಿಂದ ನಂಬಿಕೆ, ಶ್ರದ್ಧೆ ದೃಢವಾಗುವುವು. ಶ್ರದ್ಧೆ ದೃಢವಾಗುವವರೆಗೂ ಕಾಯಬೇಕಾಗಿಲ್ಲ. ಆಪ್ತರಲ್ಲಿ ನಮ್ಮ ದುಃಖಸಂಕಟಗಳನ್ನು ತೋಡಿಕೊಳ್ಳುವ ಹಾಗೆ ಪರಮಾಪ್ತನಾದ ಭಗವಂತನಲ್ಲಿ ಕಂಬನಿದುಂಬಿ ಏಕಾಂತದಲ್ಲಿ ನಿರಂತರವಾಗಿ ಪ್ರಾರ್ಥನೆ ಮಾಡಿದರೆ ಸಾಕು. ಗಟ್ಟಿಯಾಗಿ ಕೂಗಿ ಬೇಡಬೇಕಾಗಿಲ್ಲ. ಇರುವೆಯ ಹೆಜ್ಜೆ ಸದ್ದನ್ನೂ ಕೇಳುವ ಆ ದಯಾಮಯನಿಗೆ ನಮ್ಮ ಮೂಕವೇದನೆಯ ಮೌನಪ್ರಾರ್ಥನೆಯು ಕೇಳದಿರುವುದೇ? ದುಃಖಾರ್ತರಾಗಿ ಅತ್ಯಂತ ವ್ಯಾಕುಲತೆಯಿಂದ ಪ್ರಾರ್ಥಿಸುವ ಹೃದಯದ ಕರೆಗೆ ದೇವರು ಖಂಡಿತ ಕರಗುತ್ತಾನೆ. ಆತನ ಕೃಪೆ ಉಕ್ಕಿ ಹರಿಯುತ್ತದೆ. ಬೆಟ್ಟದಂತಹ ಕಷ್ಟ ಸಂಕಟಗಳು ಮಂಜಿನಂತೆ ಕರಗಿಹೋಗುತ್ತವೆ. ಪ್ರಾರ್ಥನೆ ಮಾಡುವ ಹೃದಯಕ್ಕೆ ಅಪೂರ್ವವಾದ ಶಕ್ತಿ–ಸ್ಥೈರ್ಯಗಳು ಬರುತ್ತವೆ.

ನೆನಪಿರಲಿ—ಪರರಿಗೆ ಕೇಡನ್ನು ಬಯಸುವ ಸ್ವಾರ್ಥ ಅಲ್ಲಿರಬಾರದು. ಹೃದಯ ದುಃಖಾಶ್ರುಗಳಿಂದ ತೊಯ್ದು ಪರಿಶುದ್ಧವಾಗಿರಬೇಕು.

**ಶ್ರದ್ಧಾರಹಿತ ಪ್ರಾರ್ಥನೆ ಸಹಿ ಇಲ್ಲದ ಪತ್ರದಂತೆ.**
**ಭಕ್ತಿರಹಿತ ಪ್ರಾರ್ಥನೆ ವಿಳಾಸವಿಲ್ಲದ ಪತ್ರದಂತೆ.**
**ಶ್ರದ್ಧಾಭಕ್ತಿ ಸಹಿತವಾಗಿ ವ್ಯಾಕುಲತೆಯಿಂದ ಮಾಡುವ ಪ್ರಾರ್ಥನೆ ಎಂದರೆ ಟೆಲಿಗ್ರಾಂನಂತೆ. ಆ ಕ್ಷಣದಲ್ಲೇ ಪರಿಣಾಮ! –ಮಧುಪ**